2019 ಕ.ತೀ.ವ 331

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

## ಶ್ರೀ ಮಲ್ಲೆದೇವಿರಪ್ಪ –ವಿರುದ್ಧ– ಕರ್ನಾಟಕ ರಾಜ್ಯ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ) ಮತ್ತು ಇತರರು*

6ಭಾರತ ಸಂವಿಧಾನದ 226ನೇ ಹಾಗೂ 227ನೇ ಅನುಚ್ಛೇದಗಳ ಅಡಿಯಲ್ಲಿನ ರಿಟ್ ಅರ್ಜಿ

ಕರ್ನಾಟಕ ಗ್ರಾಮ ಪಂಚಾಯತ್ (ಸ್ಥಿರ ಮತ್ತು ಚರ ಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 1966ರ 3ನೇ ಮತ್ತು 5ನೇ ನಿಯಮಗಳು, ಚರ ಸ್ವತ್ತಿನ ಆರ್ಜನೆ ಅಥವಾ ಗುತ್ತಿಗೆ ಮಾರಾಟ ಅಥವಾ ಇತರ ವರ್ಗಾವಣೆಯು, ತಾಲೂಕು ಪಂಚಾಯಿತಿಯ ಪೂರ್ವಾನುಮೋದನೆ ಇಲ್ಲದೆ ಸಿಂಧುವಾಗತಕ್ಕದ್ದಲ್ಲ ಎಂಬುದನ್ನು ಕುರಿತು ವ್ಯವಹರಿಸುತ್ತವೆ.

ಅರ್ಜಿದಾರರು, 3ನೇ ಪ್ರತಿವಾದಿ–ಗ್ರಾಮ ಪಂಚಾಯತಿ ಇವರು ಅನುಬಂಧ–ಎ ಪ್ರಕಾರ ದಿನಾಂಕ: 27.06.2012ರಂದು ಅಂಗೀಕರಿಸಿದ ಗೊತ್ತುವಳಿಯನ್ನು ಮತ್ತು ಅನುಬಂಧ–ಬಿ ಪ್ರಕಾರ ದಿನಾಂಕ: 16.08.2012ರಂದು 2ನೇ ಪ್ರತಿವಾದಿಗಳು ನೀಡಿದ ಅನುಮೋದನೆಯನ್ನು ಸಹ ರದ್ದುಗೊಳಿಸಿ ರಿಟ್ ಸರ್ಷಿಯೋರರಿಯನ್ನು ಹೊರಡಿಸಲು, ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

ಅರ್ಜಿದಾರರು, ಚಿಕ್ಕಮಗಳೂರು ತಾಲ್ಲೂಕಿನ ಲಕ್ಯಾ ಹೋಬಳಿಯ ಕ್ಯಾತನಬೀಡು ಗ್ರಾಮದಲ್ಲಿರುವ ಸರ್ವೆ ಸಂಖ್ಯೆ: 20/2ನ್ನು ಹೊಂದಿರುವ ಸ್ವತ್ತಿನ, ಹಾಗೆಯೇ, ಅದೇ ಗ್ರಾಮದ ಸರ್ವೆ ಸಂಖ್ಯೆ: 20/3ನ್ನು ಹೊಂದಿರುವ ಸ್ವತ್ತಿನ ನಿರುಪಾಧಿಕ ಮಾಲೀಕರಾಗಿದ್ದು, ಇದರಲ್ಲಿನ 1ನೇ, 2ನೇ ಮತ್ತು 3ನೇ ಪ್ರತಿವಾದಿಗಳನ್ನು ನಿಗ್ರಹಿಸಿ,

*ರಿ.ಅ.ಸಂ. 33106/2012 (ಎಲ್‌ಬಿ–ಆರ್‌ಇಎಸ್), ದಿನಾಂಕ: 2ನೇ ಜುಲೈ, 2018.

ಖಾಯಂ ನಿರ್ಬಂಧಕಾಜ್ಞೆಯ ಪರಿಹಾರಕ್ಕಾಗಿ ಚಿಕ್ಕಮಗಳೂರಿನ ಸಿವಿಲ್ ನ್ಯಾಯಾಧೀಶರ ಕಡತದಲ್ಲಿ ಒ.ಎಸ್. ಸಂಖ್ಯೆ: 144/2012ರಲ್ಲಿ ಅವರು ದಾವೆ ಹೂಡಿದ್ದಾರೆ ಎಂಬುದು ಅವರ ಮೊಕದ್ದಮೆಯಾಗಿದೆ. ಸದರಿ ಅರ್ಜಿದಾರರು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 1ನೇ ಮತ್ತು 2ನೇ ನಿಯಮಗಳ XXXIXನೇ ಕ್ರಮಾದೇಶದ ಉಪಬಂಧಗಳ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ದಾಖಲೆಯಲ್ಲಿನ ಮುಖ್ಯ ಸಂಗತಿಗಳನ್ನು ಪರಿಗಣಿಸಿದ ನಂತರ, ಅರ್ಜಿದಾರರು ಮತ್ತು ಅವರ ಗಂಡು ಮಕ್ಕಳು ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಮಾಡಿದ್ದಾರೆಂದು ವಿಚಾರಣಾ ನ್ಯಾಯಾಲಯಕ್ಕೆ ಕಂಡುಬಂದಿದ್ದು, ಆದ್ದರಿಂದ, ಅರ್ಜಿದಾರರ ಪರವಾಗಿ ಸದರಿ ದಾವೆಯಲ್ಲಿ ದಿನಾಂಕ: 2.4.2012ರಂದು ಸದರಿ ನ್ಯಾಯಾಲಯವು ಮಧ್ಯಂತರ ನಿರ್ಬಂಧಕಾಜ್ಞೆಯನ್ನು ನೀಡಿದೆ.

ತಾತ್ಕಾಲಿಕ ನಿರ್ಬಂಧಕಾಜ್ಞೆಯಿಂದ ಬಾಧಿತರಾಗಿರುವ ಮತ್ತು ಅರ್ಜಿದಾರನನ್ನು ಸಿಕ್ಕಿಹಾಕಿಸಲಾಗದ, ಒ.ಎಸ್. ಸಂಖ್ಯೆ: 214/2012ರಲ್ಲಿನ ಪ್ರತಿವಾದಿಗಳು, ಒಂದಲ್ಲ ಒಂದು ರೀತಿಯಲ್ಲಿ, ತಮ್ಮ ಸ್ವಂತ ಹಕ್ಕಿನಲ್ಲಿನ ಸ್ವತ್ತುಗಳ ಆತನ ಉಪಭೋಗದ ಸಂಬಂಧದಲ್ಲಿ ಹಾಗೂ ಆತನ ಅನುಭೋಗದ ಹಕ್ಕುಗಳ ಸಂಬಂಧದಲ್ಲಿ, ಪ್ರಶ್ನಿತ ಗೊತ್ತುವಳಿಯನ್ನು ಹೊರಡಿಸಿದ ಲಕ್ಯಾ ಗ್ರಾಮ ಪಂಚಾಯತಿಗೆ ಮನವಿ ಮಾಡಿಕೊಂಡಿರುವರೆಂದು ಕಂಡುಬರುತ್ತದೆ ಮತ್ತು ತರುವಾಯದಲ್ಲಿ ತಾಲ್ಲೂಕು ಪಂಚಾಯಿತಿಯು, ದಿನಾಂಕ: 16.08.2012ರಂದು ಅನುಮೋದನೆಯನ್ನು ನೀಡಿದೆ. ಆದುದರಿಂದ, ಈ ನ್ಯಾಯಾಲಯದ ಮುಂದೆ ಅರ್ಜಿದಾರರು ಪರಿಹಾರವನ್ನು ಕೋರಿರುತ್ತಾರೆ.

ಮೇಲೆ ಹೇಳಿದ ಶಾಸನಾತ್ಮಕ ನಿಷೇಧದ ದೃಷ್ಟಿಯಿಂದ, ವರ್ಗಾವಣೆ ಮಾಡುವ ಅಥವಾ ಗುತ್ತಿಗೆಗೆ ನೀಡುವ ಸಂಬಂಧದಲ್ಲಿ ಅಂಗೀಕರಿಸಿದ ಯಾವುದೇ ಗೊತ್ತುವಳಿಗೆ, ಮೇಲೆ ಪರ್ಯಾಲೋಚಿಸಿದಂತೆ ಪೂರ್ವಾನುಮೋದನೆ ಪಡೆಯಬೇಕು. ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ಗೊತ್ತುವಳಿಯನ್ನು ಅಂಗೀಕರಿಸುವ ಮೊದಲು, ಗ್ರಾಮ ಪಂಚಾಯಿತಿಯು ಯಾವುದೇ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ತರುವಾಯದಲ್ಲಿ, ದಿನಾಂಕ: 16.8.2012ರಂದು, ತಾಲ್ಲೂಕು ಪಂಚಾಯಿತಿಯು ಅದನ್ನು ಅನುಮೋದಿಸಿದ್ದಾಗ್ಯೂ, ಇದು, ಮೇಲೆ ಹೇಳಿದ ನಿಯಮಗಳನ್ನು ವಿಮುಕ್ತಗೊಳಿಸುವುದಿಲ್ಲ. ಆದುದರಿಂದ, ಗ್ರಾಮ ಪಂಚಾಯಿತಿಯು ಅಂಗೀಕರಿಸಿದ ಮತ್ತು ಅನುಬಂಧ–ಬಿ ಪ್ರಕಾರ ತಾಲ್ಲೂಕು ಪಂಚಾಯಿತಿಯು ಅನುಮೋದಿಸಿದ

ನಿರ್ಣಯವನ್ನು ಸಮರ್ಥಿಸಲಾಗುವುದಿಲ್ಲ. ಮೇಲೆ ಹೇಳಿದ ಕಾರಣಗಳಿಗಾಗಿ, ರಿಟ್ ಅರ್ಜಿಯಲ್ಲಿ ಎತ್ತಿದ ಅಂಶಕ್ಕೆ, ಕರ್ನಾಟಕ ಗ್ರಾಮ ಪಂಚಾಯಿತಿ (ಸ್ಥಿರ ಮತ್ತು ಚರ ಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 1996ರ 3ನೇ ಮತ್ತು 5ನೇ ನಿಯಮಗಳ ಅಡಿಯಲ್ಲಿ ಪರ್ಯಾಲೋಚಿಸಿದಂತೆ, ತಾಲ್ಲೂಕು ಪಂಚಾಯಿತಿಯ ಪೂರ್ವಾನುಮೋದನೆ ಇಲ್ಲದೆ ಪ್ರತಿವಾದಿ ಸಂಖ್ಯೆ 4 ಇವರ ಹೆಸರಿನಲ್ಲಿ ಗ್ರಾಮ ಪಂಚಾಯಿತಿಯು ಅದರ ಸ್ವತ್ತನ್ನು ವರ್ಗಾವಣೆ ಮಾಡಲು ಯಾವುದೇ ಗೊತ್ತುವಳಿಯನ್ನು ಅಂಗೀಕರಿಸಲಾಗುವುದಿಲ್ಲವೆಂದು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

ಮೇಲಿನ ಸಂಗತಿಯ ಹಿನ್ನಲೆಯಲ್ಲಿ, ರಿಟ್ ಅರ್ಜಿಗೆ ಅನುಮತಿ ನೀಡಲಾಗಿದೆ. ಪ್ರತಿವಾದಿ ಸಂಖ್ಯೆ 2 ಮತ್ತು 3 ಇವರು ಹೊರಡಿಸಿದ ಪ್ರಶ್ನಿತ ಆದೇಶಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ ಮತ್ತು ಅದು ಗ್ರಾಮ ಪಂಚಾಯಿತಿಗೆ ಸೇರಿದ ಭೂಮಿಯ ಸಂಬಂಧದಲ್ಲಿ ಅನುಭೋಗದ ಹಕ್ಕನ್ನು ಕ್ಲೇಮು ಮಾಡಿ ಅರ್ಜಿದಾರರು ಸಲ್ಲಿಸಿದ ಒ.ಎಸ್. ಸಂಖ್ಯೆ: 214/2012ರಲ್ಲಿ ಮೂಲ ದಾವೆಯ ಫಲಿತಾಂಶಕ್ಕೆ ಒಳಪಟ್ಟಿರತಕ್ಕದ್ದು.

ರಿಟ್ ಅರ್ಜಿಯನ್ನು ಅಂಗೀಕರಿಸಲಾಗಿದೆ.

*ಉಲ್ಲೇಖಿಸಲಾದ ಮೊಕದ್ದಮೆ* *ಪ್ಯಾರಾದಲ್ಲಿ*

*1. 2009(4) ಕೆಎಆರ್.ಎಲ್.ಜೆ. 173(ಡಿಬಿ)*
*ಪಿ. ತಿಮ್ಮನಾಯಕ್ ಮತ್ತು ಇತರರು*
*–ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 8*

ಅರ್ಜಿದಾರರ ಪರ : ಶ್ರೀ ಎಸ್. ಕಲ್ಯಾಣ್ ಬಸವರಾಜ್, ನ್ಯಾಯವಾದಿ.
1ನೇ ಪ್ರತ್ಯರ್ಜಿದಾರರ ಪರ : ಶ್ರೀ ಮುನಿಗಂಗಪ್ಪ, ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್.
4ನೇ ಪ್ರತ್ಯರ್ಜಿದಾರರ ಪರ : ಶ್ರೀ ವಿಘ್ನೇಶ್ವರ ಎಸ್. ಶಾಸ್ತ್ರಿ, ನ್ಯಾಯವಾದಿ.
2 ಮತ್ತು 3ನೇ ಪ್ರತ್ಯರ್ಜಿದಾರರ ಪರ : ಶ್ರೀ ಬಸವರಾಜಯ್ಯ ಎನ್., ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

ಅರ್ಜಿದಾರರು, 3ನೇ ಪ್ರತಿವಾದಿ–ಗ್ರಾಮ ಪಂಚಾಯತಿ ಇವರು ಅನುಬಂಧ–ಎ ಪ್ರಕಾರ ದಿನಾಂಕ: 27.06.2012ರಂದು ಅಂಗೀಕರಿಸಿದ ಗೊತ್ತುವಳಿಯನ್ನು ಮತ್ತು ಅನುಬಂಧ–ಬಿ ಪ್ರಕಾರ ದಿನಾಂಕ: 16.08.2012ರಂದು 2ನೇ ಪ್ರತಿವಾದಿಗಳು ನೀಡಿದ ಅನುಮೋದನೆಯನ್ನು ಸಹ ರದ್ದುಗೊಳಿಸಿ ರಿಟ್ ಸರ್ಷಿಯೋರರಿಯನ್ನು ಹೊರಡಿಸಲು, ಪ್ರಸ್ತುತ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಅರ್ಜಿದಾರರು, ಚಿಕ್ಕಮಗಳೂರು ತಾಲೂಕಿನ ಲಕ್ಯಾ ಹೋಬಳಿಯ ಕ್ಯಾತನಬೀಡು ಗ್ರಾಮದಲ್ಲಿರುವ ಸರ್ವೆ ಸಂಖ್ಯೆ: 20/2ನ್ನು ಹೊಂದಿರುವ ಸ್ವತ್ತಿನ, ಹಾಗೆಯೇ, ಅದೇ ಗ್ರಾಮದ ಸರ್ವೆ ಸಂಖ್ಯೆ: 20/3ನ್ನು ಹೊಂದಿರುವ ಸ್ವತ್ತಿನ ನಿರುಪಾಧಿಕ ಮಾಲೀಕರಾಗಿದ್ದು, ಇದರಲ್ಲಿನ 1ನೇ, 2ನೇ ಮತ್ತು 3ನೇ ಪ್ರತಿವಾದಿಗಳನ್ನು ನಿಗ್ರಹಿಸಿ, ಖಾಯಂ ನಿರ್ಬಂಧಕಾಜ್ಞೆಯ ಪರಿಹಾರಕ್ಕಾಗಿ ಚಿಕ್ಕಮಗಳೂರಿನ ಸಿವಿಲ್ ನ್ಯಾಯಾಧೀಶರ ಕಡತದಲ್ಲಿ ಒ.ಎಸ್. ಸಂಖ್ಯೆ: 144/2012ರಲ್ಲಿ ಅವರು ದಾವೆ ಹೂಡಿದ್ದಾರೆ ಎಂಬುದು ಅವರ ಮೊಕದ್ದಮೆಯಾಗಿದೆ. ಸದರಿ ಅರ್ಜಿದಾರರು, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ 1ನೇ ಮತ್ತು 2ನೇ ನಿಯಮಗಳ 39ನೇ ಕ್ರಮಾದೇಶದ ಉಪಬಂಧಗಳ ಅಡಿಯಲ್ಲಿ ಅರ್ಜಿ ಸಲ್ಲಿಸಿದ್ದು, ದಾಖಲೆಯಲ್ಲಿನ ಮುಖ್ಯ ಸಂಗತಿಗಳನ್ನು ಪರಿಗಣಿಸಿದ ನಂತರ, ಅರ್ಜಿದಾರರು ಮತ್ತು ಅವರ ಗಂಡು ಮಕ್ಕಳು ಮೊದಲ ನೋಟಕ್ಕೆ ಸಮ್ಮತವಾದ ವಾದವನ್ನು ಮಾಡಿದ್ದಾರೆಂದು ವಿಚಾರಣಾ ನ್ಯಾಯಾಲಯಕ್ಕೆ ಕಂಡುಬಂದಿದ್ದು, ಆದ್ದರಿಂದ, ಅರ್ಜಿದಾರರ ಪರವಾಗಿ ಸದರಿ ದಾವೆಯಲ್ಲಿ ದಿನಾಂಕ: 2.4.2012ರಂದು ಸದರಿ ನ್ಯಾಯಾಲಯವು ಮಧ್ಯಂತರ ನಿರ್ಬಂಧಕಾಜ್ಞೆಯನ್ನು ನೀಡಿದೆ.

3. ಅರ್ಜಿದಾರರು, ಚಿಕ್ಕಮಗಳೂರಿನ ಪ್ರಧಾನ ಸತ್ರ ನ್ಯಾಯಾಧೀಶರ ಕಡತ ಒ.ಎಸ್. ಸಂಖ್ಯೆ: 214/2012ರಲ್ಲಿ, ಪಂಚಾಯತಿಗೆ ಸೇರಿದ ಹಿತ್ತಿಲಿನಲ್ಲಿ ಇರುವ

ತನ್ನ ದಾರಿ ಹಕ್ಕಿನಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಮತ್ತು ಕೆಲ ಸಮಯದಿಂದ ಅದನ್ನು ಬಳಸುವುದರಿಂದ ಅರ್ಜಿದಾರರಿಗೆ ನಿರ್ಬಂಧ ಒಡ್ಡುವ ಕಾನೂನುಬಾಹಿರ ಪ್ರಯತ್ನಗಳನ್ನು ಮಾಡುತ್ತಿರುವರೆಂದು ಮತ್ತೊಂದು ದಾವೆಯನ್ನು ಹೂಡಿದ್ದಾರೆ. ಸದರಿ ದಾವೆಯಲ್ಲಿಯೂ ಸಹ, ಈ ಎರಡು ಅರ್ಜಿಗಳನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆಯ 39ನೇ ಕ್ರಮಾದೇಶದ 1ನೇ ಮತ್ತು 2ನೇ ನಿಯಮಗಳ ಅಡಿಯಲ್ಲಿ ಮಧ್ಯಂತರ ಆದೇಶ 1 ಮತ್ತು 2 ಇವುಗಳನ್ನು ದಿನಾಂಕ: 21.7.2012ರ ಆದೇಶದ ಪ್ರಕಾರ ಪುರಸ್ಕರಿಸಿ, ಖಾಯಂ ನಿರ್ಬಂಧಕಾಜ್ಞೆಯನ್ನು ಹೊರಡಿಸಲಾಗಿದೆ. ಇದರಲ್ಲಿನ ಟ್ರಸ್ಟ್‌ನ ಅಧ್ಯಕ್ಷರಾದ 4ನೇ ಪ್ರತಿವಾದಿಗಳು ತಮ್ಮ ಸ್ಥಾನಬಲದಿಂದ, ತಿರಸ್ಕರಿಸಲಾಗಿರುವ ಸದರಿ ವ್ಯವಹರಣೆಗಳ ಸಂಬಂಧದಲ್ಲಿ ದಾವೆ ಹೂಡಲು ಅರ್ಜಿಯನ್ನು ಸಲ್ಲಿಸಿದ್ದಾರೆ.

4. ತಾತ್ಕಾಲಿಕ ನಿರ್ಬಂಧಕಾಜ್ಞೆಯಿಂದ ಬಾಧಿತರಾಗಿರುವ ಮತ್ತು ಅರ್ಜಿದಾರನನ್ನು ಸಿಕ್ಕಿಹಾಕಿಸಲಾಗದ, ಒ.ಎಸ್. ಸಂಖ್ಯೆ: 214/2012ರಲ್ಲಿನ ಪ್ರತಿವಾದಿಗಳು, ಒಂದಲ್ಲ ಒಂದು ರೀತಿಯಲ್ಲಿ, ತಮ್ಮ ಸ್ವಂತ ಹಕ್ಕಿನಲ್ಲಿನ ಸ್ವತ್ತುಗಳ ಆತನ ಉಪಭೋಗದ ಸಂಬಂಧದಲ್ಲಿ ಹಾಗೂ ಆತನ ಅನುಭೋಗದ ಹಕ್ಕುಗಳ ಸಂಬಂಧದಲ್ಲಿ, ಪ್ರಶ್ನಿತ ಗೊತ್ತುವಳಿಯನ್ನು ಹೊರಡಿಸಿದ ಲಕ್ಯಾ ಗ್ರಾಮ ಪಂಚಾಯತಿಗೆ ಮನವಿ ಮಾಡಿಕೊಂಡಿರುವರೆಂದು ಕಂಡುಬರುತ್ತದೆ ಮತ್ತು ತರುವಾಯದಲ್ಲಿ ತಾಲೂಕು ಪಂಚಾಯಿತಿಯು, ದಿನಾಂಕ: 16.08.2012ರಂದು ಅನುಮೋದನೆಯನ್ನು ನೀಡಿದೆ. ಆದುದರಿಂದ, ಈ ನ್ಯಾಯಾಲಯದ ಮುಂದೆ ಅರ್ಜಿದಾರರು ಪರಿಹಾರವನ್ನು ಕೋರಿರುತ್ತಾರೆ.

5. 2ನೇ ಮತ್ತು 3ನೇ ಪ್ರತಿವಾದಿಗಳು, ಯಾವುವೇ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲ, ಆದರೆ 4ನೇ ಪ್ರತಿವಾದಿಗಳು ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ.

6. 4ನೇ ಪ್ರತಿವಾದಿಗಳು ತಮ್ಮ ಆಕ್ಷೇಪಣೆಯ ಹೇಳಿಕೆಯಲ್ಲಿ, ಗ್ರಾಮ ಪಂಚಾಯಿತಿಯು ಅಂಗೀಕರಿಸಿದ ಗೊತ್ತುವಳಿಯ ವಿರುದ್ಧ ಅರ್ಜಿದಾರರು ಸಲ್ಲಿಸಿದ

ಈ ರಿಟ್ ಅರ್ಜಿಯು ಸಮರ್ಥನೀಯವಾದುದಲ್ಲವೆಂದು ವಾದಿಸಿದ್ದಾರೆ. ಗ್ರಾಮ ಪಂಚಾಯಿತಿಯು ಅಂಗೀಕರಿಸಿದ ಗೊತ್ತುವಳಿಯನ್ನು ತರುವಾಯದಲ್ಲಿ ತಾಲೂಕು ಪಂಚಾಯಿತಿಯು ಅನುಮೋದಿಸಿದೆ; ಆದುದರಿಂದ ಈ ನ್ಯಾಯಾಲಯದ ಮುಂದೆ ಯಾವುದೇ ಪರಿಹಾರ ಕೋರಲು ಅರ್ಜಿದಾರರು ಹಕ್ಕುಳ್ಳವರಾಗಿರುವುದಿಲ್ಲ ಮತ್ತು ಅಧಿಭೋಗದ ಹಕ್ಕಿಗೆ ಸಂಬಂಧಿಸಿದಂತೆ ಅರ್ಜಿದಾರರು ಸಲ್ಲಿಸಿದ ನಿರ್ಧರಣೆ ಸಂಖ್ಯೆ: 233/2015ನ್ನು ಹೊಂದಿರುವ ಸ್ವತ್ತಿನ ಸಂಬಂಧದಲ್ಲಿನ ಸಿವಿಲ್ ವಿವಾದವು ಸಹ ಇತ್ಯರ್ಥದಲ್ಲಿದೆ. ಆದುದರಿಂದ, ರಿಟ್ ಅರ್ಜಿಯನ್ನು ವಜಾಗೊಳಿಸಲು ಕೋರಿದ್ದಾರೆ.

7. ಪಕ್ಷಕಾರರ ಪರ ನ್ಯಾಯವಾದಿಗಳ ವಾದವನ್ನು ನಾನು ಆಲಿಸಿದ್ದೇನೆ.

8. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿ. ಕಲ್ಯಾಣ್ ಬಸವರಾಜ್‌ರವರು, ಅನುಬಂಧ–ಎ ಪ್ರಕಾರ, 3ನೇ ಪ್ರತಿವಾದಿಗಳು ಅಂಗೀಕರಿಸಿದ ದಿನಾಂಕ: 27.6.2012ರ ಪ್ರಶ್ನಿತ ಗೊತ್ತುವಳಿಯು ಹಾಗೂ ತತ್ಪರಿಣಾಮವಾಗಿ, ಅನುಬಂಧ–ಬಿ ಪ್ರಕಾರ 2ನೇ ಪ್ರತಿವಾದಿ–ತಾಲೂಕು ಪಂಚಾಯಿತಿಯು ನೀಡಿದ ದಿನಾಂಕ: 16.8.2012ರ ಅನುಮೋದನೆಯು ತಪ್ಪಾಗಿವೆ ಮತ್ತು ದಾಖಲೆಯಲ್ಲಿರುವ ಸಂಗತಿಗಳಿಗೆ ವಿರುದ್ಧವಾಗಿವೆ ಎಂದು ಪ್ರಬಲವಾಗಿ ವಾದಿಸಿದ್ದಾರೆ. ಇದಲ್ಲದೆ ಅವರು, ಗ್ರಾಮ ಪಂಚಾಯಿತಿಯು ಅಂಗೀಕರಿಸಿದ ಈ ಗೊತ್ತುವಳಿಯು, ಕರ್ನಾಟಕ ಗ್ರಾಮ ಪಂಚಾಯಿತಿ (ಚರ ಮತ್ತು ಸ್ಥಿರ ಸ್ವತ್ತಿನ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 1996ರ 3ನೇ ಮತ್ತು 5ನೇ ನಿಯಮಗಳ ಉಪಬಂಧಗಳಿಗೆ ವಿರುದ್ಧವಾಗಿವೆ ಎಂದು ವಾದಿಸಿರುವರು. ಅಲ್ಲದೆ ಅವರು, ***ಪಿ. ತಿಮ್ಮನಾಯಕ್ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[1] ಮೊಕದ್ದಮೆಯಲ್ಲಿ, ಈ ನ್ಯಾಯಾಲಯದ ವಿಭಾಗೀಯ ಪೀಠವು, ಪೂರ್ವ ಮಂಜೂರಾತಿ ಪಡೆಯಲು ವ್ಯವಹರಣೆಗಳನ್ನು ಪ್ರಾರಂಭಿಸುವುದಕ್ಕಾಗಿ, ತಾಲೂಕು ಪಂಚಾಯಿತಿಯ ತರುವಾಯದ

1. 2009(4) ಕೆಎಆರ್.ಎಲ್.ಜೆ. 173(ಡಿಬಿ)

ಮಂಜೂರಾತಿಯಷ್ಟೇ ಅಲ್ಲದೆ, ಪೂರ್ವ ನಿರ್ಣಯ ಷರತ್ತು ಕಡ್ಡಾಯವಾಗಿದೆ ಎಂದು ತೀರ್ಪು ನೀಡಿದೆ ಎಂದು ವಾದಿಸಿದ್ದಾರೆ. ತರುವಾಯದ ನಿರ್ಣಯವು, ಪ್ರಾರಂಭದ ಕಾನೂನುಬಾಹಿರತೆಯನ್ನು ರಕ್ಷಿಸುವುದಿಲ್ಲ ಮತ್ತು ಆದುದರಿಂದ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 209ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ, ತಾಲೂಕು ಪಂಚಾಯಿತಿಯಿಂದ ಪೂರ್ವ ಮಂಜೂರಾತಿ ಪಡೆಯುವುದು ಕಡ್ಡಾಯವಾಗಿದೆ. ಆದುದರಿಂದ, ಅವರು ರಿಟ್ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

9. ಇದಕ್ಕೆ ತದ್ವಿರುದ್ಧವಾಗಿ ಪ್ರತಿವಾದಿ ಸಂಖ್ಯೆ 4 ಇವರ ಪರ ವಾದಿಸಿದ ಮಾನ್ಯ ನ್ಯಾಯವಾದಿಗಳಾದ ಶ್ರೀ ವಿಘ್ನೇಶ್ವರ ಎಸ್. ಶಾಸ್ತ್ರಿ ಇವರು, ಗ್ರಾಮ ಪಂಚಾಯಿತಿಯು ಅಂಗೀಕರಿಸಿದ ಗೊತ್ತುವಳಿಯನ್ನು, ತರುವಾಯದಲ್ಲಿ ತಾಲೂಕು ಪಂಚಾಯಿತಿಯು ಅನುಮೋದಿಸಿದೆ ಮತ್ತು ಈಗಾಗಲೇ ಅರ್ಜಿದಾರರು, ಅದೇ ಗ್ರಾಮದ ಅನುಭೋಗದ ಹಕ್ಕಿಗೆ ಸಂಬಂಧಿಸಿದಂತೆ 233, 215, 233 ಸಂಖ್ಯೆಗಳನ್ನು ಹೊಂದಿದ್ದ ಸ್ವತ್ತು ಮೌಲ್ಯ ನಿರ್ಧರಣೆಯ ಸಂಬಂಧದಲ್ಲಿ ದಾವೆಯನ್ನು ಹೂಡಿದ್ದಾರೆ. ಆದುದರಿಂದ, ಗ್ರಾಮ ಪಂಚಾಯಿತಿಯು ಅಂಗೀಕರಿಸಿದ ನಿರ್ಣಯವನ್ನು ಪ್ರಶ್ನಿಸಿ ಅಹವಾಲು ಹೇಳಿಕೊಳ್ಳುವ ಹಕ್ಕನ್ನು ಅರ್ಜಿದಾರರು ಹೊಂದಿರುವುದಿಲ್ಲ. ಹಾಗಾಗಿ, ಅವರು ರಿಟ್ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

10. ಪ್ರತಿವಾದಿ ಸಂಖ್ಯೆ: 2 ಮತ್ತು 3 ಇವರ ಪರ ವಾದಿಸಿದ ಮಾನ್ಯ ನ್ಯಾಯವಾದಿ ಶ್ರೀ ಬಸವರಾಜಯ್ಯ ಮತ್ತು ಪ್ರತಿವಾದಿ ಸಂಖ್ಯೆ: 1 ಇವರ ಪರ ವಾದಿಸಿದ ಮಾನ್ಯ ಉಚ್ಚ ನ್ಯಾಯಾಲಯದ ಸರ್ಕಾರಿ ಪ್ಲೀಡರ್ ಶ್ರೀ ಮುನಿಗಂಗಪ್ಪ ಇವರು, ನಿಯಮವಿದ್ದಾಗ, ಕರ್ನಾಟಕ ಗ್ರಾಮ ಪಂಚಾಯಿತಿ (ಚರ ಮತ್ತು ಸ್ಥಿರ ಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 1996ರ 3ನೇ ಮತ್ತು 5ನೇ ನಿಯಮಗಳ ಉಪಬಂಧಗಳ ಅಡಿಯಲ್ಲಿ ಪರ್ಯಾಲೋಚಿಸಲಾದ ಪ್ರಕ್ರಿಯೆಯನ್ನು ಅನುಸರಿಸುವುದು ಗ್ರಾಮ ಪಂಚಾಯಿತಿ ಮತ್ತು ತಾಲೂಕು ಪಂಚಾಯಿತಿ ಇವೆರಡರ

ಕರ್ತವ್ಯವಾಗಿದೆ ಎಂದು ವಾದಿಸಿದ್ದಾರೆ. ಆದುದರಿಂದ, ರಿಟ್ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

11. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಾಡಿದ ಪರಸ್ಪರ ವಿರುದ್ಧವಾದ ವಾದಗಳನ್ನು ಗಮನದಲ್ಲಿರಿಸಿಕೊಂಡಲ್ಲಿ, ಪ್ರಸ್ತುತ ರಿಟ್ ಅರ್ಜಿಯಲ್ಲಿ ಪರಿಗಣನೆಗೆ ಉದ್ಭವಿಸುವ ಏಕೈಕ ಅಂಶವೆಂದರೆ:

> "ತಾಲೂಕು ಪಂಚಾಯಿತಿಯಿಂದ ಪೂರ್ವಾನುಮತಿಯಿಲ್ಲದೆ, 4ನೇ ಪ್ರತಿವಾದಿಗಳ ಪರವಾಗಿ ಸ್ವತ್ತಿನ ವರ್ಗಾವಣೆಗೆ ಗ್ರಾಮ ಪಂಚಾಯಿತಿಯು ಗೊತ್ತುವಳಿಯನ್ನು ಅಂಗೀಕರಿಸಬಹುದೇ?" ಎಂಬುದಾಗಿದೆ.

12. ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳು ಮಾಡಿದ ವಾದಗಳನ್ನು ನಾನು ಅತ್ಯಂತ ಕಾಳಜಿಯಿಂದ ಪರಿಗಣಿಸಿದ್ದೇನೆ ಮತ್ತು ದಾಖಲೆಯಲ್ಲಿನ ಸಂಪೂರ್ಣ ವಿಷಯವನ್ನು ಎಚ್ಚರಿಕೆಯಿಂದ ಪರಿಶೀಲಿಸಿದ್ದೇನೆ.

13. ಅರ್ಜಿದಾರರು, ಚಿಕ್ಕಮಗಳೂರು ತಾಲೂಕಿನ ಲಕ್ಯಾ ಹೋಬಳಿಯ ಕ್ಯಾತನಬೀಡು ಗ್ರಾಮದ 20/2 ಮತ್ತು 20/3 ಸರ್ವೆ ಸಂಖ್ಯೆಗಳನ್ನು ಹೊಂದಿರುವ ಸ್ವತ್ತಿನ ಮಾಲೀಕರಾಗಿದ್ದು, ಅವರ ಸ್ವತ್ತು ಇರುವ ಸ್ಥಳವನ್ನು ತಲುಪಲು ಅದೇ ಗ್ರಾಮದ ನಿರ್ಧರಣಾ ಸಂಖ್ಯೆ: 233.215ನ್ನು ಹೊಂದಿರುವ ಸ್ವತ್ತನ್ನು ಬಳಸುತ್ತಿದ್ದಾರೆ ಹಾಗೂ ತನ್ನ ಅನುಭೋಗದ ಹಕ್ಕನ್ನು ಕ್ಲೇಮು ಮಾಡಿ, ಅವರು, ಸದರಿ ಸ್ವತ್ತುಗಳ ಸಂಬಂಧದಲ್ಲಿ ಒ.ಎಸ್. ಸಂಖ್ಯೆ: 214/2012ನ್ನು ಸಲ್ಲಿಸಿದ್ದಾರೆ. ಸದರಿ ದಾವೆ ಈಗಲೂ ನಿರ್ಣಯಕ್ಕಾಗಿ ಇತ್ಯರ್ಥದಲ್ಲಿದೆ.

14. ಈ ಸ್ವತ್ತು ಗ್ರಾಮ ಪಂಚಾಯಿತಿಗೆ ಸೇರಿದೆಯೆಂಬ ಬಗ್ಗೆ ಸಹ ಯಾವುದೇ ವಿವಾದವಿಲ್ಲ. ಸದರಿ ಸ್ವತ್ತಿನ ಭಾಗವನ್ನು, 5ನೇ ಪ್ರತಿವಾದಿಯ ಹೆಸರಿಗೆ ಗ್ರಾಮ ಪಂಚಾಯಿತಿಯು, ಗೊತ್ತುವಳಿಯನ್ನು ಅಂಗೀಕರಿಸುವ ಮೂಲಕ ವರ್ಗಾಯಿಸಿದೆ.

15. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅಧ್ಯಾಯ–XVರ 209ನೇ ಪ್ರಕರಣದ ಉಪಬಂಧಗಳ ಅನುಸಾರ, ಗ್ರಾಮ ಪಂಚಾಯಿತಿಯು ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು, ಇತ್ಯಾದಿ ಕುರಿತು ವ್ಯವಹರಿಸುತ್ತವೆ. ಅದು ಈ ಕೆಳಗಿನಂತಿದೆ:

> *"ಪ್ರಕರಣ 209. ಗ್ರಾಮ ಪಂಚಾಯತಿಯು, ಸ್ವತ್ತನ್ನು ಆರ್ಜಿಸಬಹುದು, ಧಾರಣ ಮಾಡಬಹುದು ಮತ್ತು ವಿಲೆ ಮಾಡಬಹುದು.– ಗ್ರಾಮ ಪಂಚಾಯತಿಯು ಅದು ಅಧಿಕಾರ ಹೊಂದಿರುವಂಥ ಪ್ರದೇಶದ ಪರಿಮಿತಿಯೊಳಗೆ ಆಗಲಿ ಅಥವಾ ಅದರ ಹೊರಗೆ ಆಗಲಿ ಇರುವ ಚರ ಅಥವಾ ಸ್ಥಿರ ಸ್ವತ್ತನ್ನು ಆರ್ಜಿಸುವ, ಧಾರಣ ಮಾಡುವ ಮತ್ತು ವಿಲೆ ಮಾಡುವ ಅಥವಾ ಅದರಲ್ಲಿ ನಿಹಿತಗೊಳಿಸಲಾದ ಅಥವಾ ಅದರಿಂದ ಆರ್ಜಿಸಲಾದ ಯಾವುದೇ ಚರ ಅಥವಾ ಸ್ಥಿರ ಸ್ವತ್ತಿನ ವರ್ಗಾವಣೆಗೆ ಮತ್ತು ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಿರುವ ಇತರ ಎಲ್ಲಾ ಕಾರ್ಯಗಳನ್ನು ಮಾಡಲು ಗ್ರಾಮ ಪಂಚಾಯತಿಗೆ ಇರುವ ಅಧಿಕಾರವು, ಈ ಸಂಬಂಧದಲ್ಲಿ ಸರ್ಕಾರದಿಂದ ಮಾಡಲಾದ ನಿಯಮಗಳಿಗೆ ಒಳಪಟ್ಟಿರತಕ್ಕದ್ದು:*
>
> *ಪರಂತು, ಐದು ವರ್ಷಗಳನ್ನು ಮೀರಿದ ಅವಧಿಗಾಗಿ ಯಾವುದೇ ಸ್ಥಿರ ಸ್ವತ್ತಿನ ಗುತ್ತಿಗೆಯನ್ನು ಮತ್ತು ಅಂಥ ಯಾವುದೇ ಸ್ವತ್ತಿನ ಮಾರಾಟ ಅಥವಾ ಇತರ ವರ್ಗಾವಣೆಯನ್ನು, ತಾಲೂಕು ಪಂಚಾಯಿತಿಯ ಪೂರ್ವ–ಮಂಜೂರಾತಿ ಇಲ್ಲದೆ ಮಾಡತಕ್ಕದ್ದಲ್ಲ."*

16. 209ನೇ ಪ್ರಕರಣದ ಉಪಬಂಧಗಳ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ, ವಿಧಾನಮಂಡಲವು, ಕರ್ನಾಟಕ ಗ್ರಾಮ ಪಂಚಾಯತ್ (ಸ್ಥಿರ ಮತ್ತು ಚರ ಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 1996 ಎಂದು ಕರೆಯಲಾಗುವ

ನಿಯಮಗಳನ್ನು ರಚಿಸಿದೆ. ಸದರಿ ನಿಯಮಗಳ 3ನೇ ಮತ್ತು 5ನೇ ನಿಯಮಗಳನ್ನು ಈ ಕೆಳಗಿನಂತೆ ಓದಲಾಗಿದೆ:–

> "3. ಚರ ಸ್ವತ್ತಿನ ಆರ್ಜನೆ ಅಥವಾ ಗುತ್ತಿಗೆ ಮಾರಾಟ ಅಥವಾ ಇತರ ವರ್ಗಾವಣೆ:– (1) ಗ್ರಾಮ ಪಂಚಾಯಿತಿಯು ಮಾಡಿದ ಐದು ಸಾವಿರ ರೂಪಾಯಿಗಳ ಮೌಲ್ಯವನ್ನು ಮೀರುವ ಯಾವುದೇ ಚರ ಸ್ವತ್ತಿನ ಆರ್ಜನೆ ಅಥವಾ ಗುತ್ತಿಗೆ ಮಾರಾಟ ಅಥವಾ ವರ್ಗಾವಣೆಯು, ಅಂಥ ಆರ್ಜನೆ ಅಥವಾ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಗೆ ತಾಲ್ಲೂಕು ಪಂಚಾಯಿತಿಯ ಪೂರ್ವಾನುಮೋದನೆಯನ್ನು ಪಡೆದಿದ್ದ ಹೊರತು ಸಿಂಧುವಾಗತಕ್ಕದ್ದಲ್ಲ.
>
> (2) ಗ್ರಾಮ ಪಂಚಾಯಿತಿಯು ಮಾಡಿಕೊಳ್ಳುವ ಯಾವುದೇ ಚರ ಸ್ವತ್ತಿನ ಪ್ರತಿಯೊಂದು ಆರ್ಜನೆ ಅಥವಾ ಗುತ್ತಿಗೆ ಮಾರಾಟ ಅಥವಾ ವರ್ಗಾವಣೆಯುನ್ನು ಲಿಖಿತವಾಗಿ ಬರೆದುಕೊಡತಕ್ಕದ್ದು.
>
> (3) ಗ್ರಾಮ ಪಂಚಾಯಿತಿಯು, ಯಾವುದೇ ಚರ ಸ್ವತ್ತನ್ನು ಖರೀದಿಸಲು ಅಥವಾ ತನಗೆ ಸೇರಿದ ಚರ ಸ್ವತ್ತನ್ನು ಮಾರಾಟ ಮಾಡಲು ಪ್ರಸ್ತಾಪಿಸಿದಲ್ಲಿ, ಖರೀದಿಸಲು ಅಥವಾ ಮಾರಾಟ ಮಾಡಲು ಪ್ರಸ್ತಾಪಿಸಿದ ವಸ್ತುಗಳ ಅಥವಾ ಸರಕುಗಳ ವಿವರಗಳನ್ನು ಉಲ್ಲೇಖಿಸಿ, ಕಾರ್ಯದರ್ಶಿಯು ಸಹಿ ಮಾಡಿದ ಒಂದು ನೋಟೀಸನ್ನು ಸಂದರ್ಭಾನುಸಾರ, ಉದ್ದೇಶಿತ ಖರೀದಿದಾರನು ಅಥವಾ ಮಾರಾಟಗಾರನು ಮೊಹರು ಟೆಂಡರನ್ನು ಸಲ್ಲಿಸಲು ಕೊನೆಪಕ್ಷ ಒಂದು ವಾರದ ಕಾಲಾವಕಾಶವನ್ನು ಕೊಟ್ಟು ಗ್ರಾಮ ಪಂಚಾಯಿತಿಯ ಕಚೇರಿಯ ಸೂಚನಾ ಫಲಕದ ಮೇಲೆ ಪ್ರಕಟಿಸತಕ್ಕದ್ದು;

ಪರಂತು, ಗ್ರಾಮ ಪಂಚಾಯಿತಿಗೆ ಸೇರಿದ ಯಾವುದೇ ಚರ ಸ್ವತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಲು ಪ್ರಸ್ತಾಪಿಸಿದ್ದಲ್ಲಿ, ಹಾಗೆ ಪ್ರಕಟಿಸಲಾದ ನೋಟೀಸಿನಲ್ಲಿ ಅಂಥ ಹರಾಜು ಮಾರಾಟ ದಿನಾಂಕ, ಸಮಯ ಮತ್ತು ಸ್ಥಳವನ್ನು ನಿರ್ದಿಷ್ಟಪಡಿಸತಕ್ಕದ್ದು;

**೫. ಸ್ಥಿರ ಸ್ವತಿನ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆ:–** ಐದು ಸಾವಿರ ರೂಪಾಯಿಗಳ ಮೌಲ್ಯವನ್ನು ಮೀರುವ ಯಾವುದೇ ಸ್ಥಿರ ಸ್ವತ್ತಿನ ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯು, ಅಂಥ ವರ್ಗಾವಣೆಗಾಗಿ ತಾಲೂಕು ಪಂಚಾಯಿತಿಯ ಪೂರ್ವಾನುಮೋದನೆಯನ್ನು ಪಡೆದ ಹೊರತು ಸಿಂಧುವಾಗತಕ್ಕದ್ದಲ್ಲ. ಗ್ರಾಮ ಪಂಚಾಯಿತಿಯ ಸ್ಥಿರ ಸ್ವತ್ತಿನ ಪ್ರತಿಯೊಂದು ಗುತ್ತಿಗೆ, ಮಾರಾಟ ಅಥವಾ ಇತರ ವರ್ಗಾವಣೆಯ ಪತ್ರವು, ಈ ನಿಯಮಗಳಿಗೆ ಲಗತ್ತಿಸಲಾಗಿದ್ದ ಅನುಸೂಚಿಯಲ್ಲಿ ಗೊತ್ತುಪಡಿಸಿದ ಯಾವುದಾದರೊಂದು ನಮೂನೆಯಲ್ಲಿ ಇರತಕ್ಕದ್ದು."

17. ಈ ನ್ಯಾಯಾಲಯವು, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 209ನೇ ಪ್ರಕರಣದ ಉಪಬಂಧಗಳನ್ನು ಪರಿಗಣಿಸಿ, ***ಪಿ. ತಿಮ್ಮನಾಯಕ್ ಮತ್ತು ಇತರರು –ವಿರುದ್ಧ– ಕರ್ನಾಟಕ ರಾಜ್ಯ*** (ಮೇಲಿನ), ಮೊಕದ್ದಮೆಯ 9, 12, 13, 13.2 ಮತ್ತು 13.3 ಈ ಕಂಡಿಕೆಗಳಲ್ಲಿ, ಈ ಕೆಳಗಿನಂತೆ ತೀರ್ಮ ನೀಡಿದೆ:

*"9. ಗ್ರಾಮ ಪಂಚಾಯಿತಿಯು, 9ನೇ ನವಂಬರ್, 1998ರಂದು ಸಾರ್ವಜನಿಕ ನೋಟೀಸನ್ನು ಹೊರಡಿಸುವ ಮೂಲಕ, ಗ್ರಾಮ ಪಂಚಾಯಿತಿಯು ಮಾಲಿಕತ್ವ ಹೊಂದಿದ ಸ್ವತ್ತಿನ ವಿಲೆಗೆ ಪ್ರಸ್ತಾವ ಸಲ್ಲಿಸಿತ್ತು ಎಂಬ ಸಂಗತಿಯನ್ನು ಒಪ್ಪಿಕೊಳ್ಳಲಾಗಿದೆ ಮತ್ತು ಸದರಿ*

*ನೋಟೀಸಿಗೆ ಅನುಸಾರವಾಗಿ, ಅರ್ಜಿದಾರರು, ತಮ್ಮ ಮಾರಾಟ ಪ್ರತಿಫಲವನ್ನು ನೀಡಿದ್ದಾರೆ ಮತ್ತು ಅದನ್ನು ತಾಲ್ಲೂಕು ಪಂಚಾಯಿತಿಯು 11ನೇ ಜನವರಿ, 1999ರಂದು ಗೊತ್ತುವಳಿಯ ಮೂಲಕ ಅಂಗೀಕರಿಸಿದೆ. ಆದರೆ ಜಿಲ್ಲಾ ಪಂಚಾಯಿತಿಯು, 16ನೇ ಮಾರ್ಚ್, 1999ರ ಆದೇಶದ ಮೂಲಕ, ಗ್ರಾಮ ಪಂಚಾಯಿತಿಯು ಅರ್ಜಿದಾರರ ಪರವಾಗಿ ಸ್ಥಿರ ಸ್ವತ್ತಿನ ವಿಲೆ ಮಾಡುವ ಪ್ರಸ್ತಾವವನ್ನು ವಜಾಗೊಳಿಸಿದೆ.*

*11. 209ನೇ ಪ್ರಕರಣದ ಉಪಬಂಧವನ್ನು ತಿದ್ದುಪಡಿ ಅಧಿನಿಯಮ 2003ರ 37ರ ಮೂಲಕ ಬಿಟ್ಟುಬಿಡಲಾಗಿದೆಯಾದರೂ, ಗ್ರಾಮ ಪಂಚಾಯಿತಿಯು ಮಾಲಿಕತ್ವ ಹೊಂದಿದ ಸ್ಥಿರ ಸ್ವತ್ತಿನ ವಿಲೆಯ ಕಾರ್ಯವನ್ನು ಪ್ರಾರಂಭಿಸಿದ ಪ್ರಶ್ನಿತ ಕ್ರಮದ ದಿನದಂದು, ಈ ಉಪಬಂಧವು ಕಾರ್ಯಾಚರಣೆಯಲ್ಲಿತ್ತು.*

*12. ಗ್ರಾಮ ಪಂಚಾಯಿತಿಯು ಮಾಲಿಕತ್ವ ಹೊಂದಿದ ನಿವೇಶನಗಳನ್ನು ಮಾರಾಟ ಮಾಡಲು ಪ್ರಸ್ತಾಪಿಸಿ, ದಿನಾಂಕ: 9ನೇ ನವಂಬರ್, 1998ರಂದು, ಗ್ರಾಮ ಪಂಚಾಯಿತಿಯು ಹೊರಡಿಸಿದ ಅಧಿಸೂಚನೆಯನ್ನು ಅನುಮೋದಿಸಿ, ದಿನಾಂಕ: 11ನೇ ಜನವರಿ, 1999ರ ತಾಲೂಕು ಪಂಚಾಯಿತಿಯ ಗೊತ್ತುವಳಿಯನ್ನು, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ನಮ್ಮ ಗಮನಕ್ಕೆ ತಂದಿರುವುದು ಸತ್ಯವಾಗಿದ್ದರೂ, 209ನೇ ಪ್ರಕರಣದ ಉಪಬಂಧದ ಪ್ರಕಾರ, ಚರ ಮತ್ತು ಸ್ಥಿರ ಎರಡೂ ರೀತಿಯ ಸ್ವತ್ತಿನ ವಿಲೆಗೆ ಯಾವುದೇ ಕ್ರಮ ಪ್ರಾರಂಭಿಸುವ ಮೊದಲು, ತಾಲೂಕು ಪಂಚಾಯಿತಿಯು ಪೂರ್ವಾನುಮೋದನೆ ಅಗತ್ಯವಾಗಿತ್ತೇ ಹೊರತು ತರುವಾಯದ ಅನುಮೋದನೆಯಲ್ಲ. ಈ ವಿಷಯದ ಸಂಬಂಧದಲ್ಲಿ, ಗ್ರಾಮ ಪಂಚಾಯಿತಿಯು ಮಾಲಿಕತ್ವ ಹೊಂದಿದ ಸ್ವತ್ತುಗಳ ವಿಲೆಗೆ ಪ್ರಸ್ತಾವನೆ*

*ಸಲ್ಲಿಸಿದ ಕ್ರಮವು, ಮಾನ್ಯ ಏಕ ಪೀಠ ನ್ಯಾಯಾಧೀಶರು ಸರಿಯಾಗಿಯೇ ನಿರ್ಣಯಿಸಿದಂತೆ ಅಧಿಕಾರ ವ್ಯಾಪ್ತಿ ಇಲದೆ ಮಾಡಿದ ಕಾರ್ಯವಾಗಿದೆ ಎಂಬ ಅಭಿಪ್ರಾಯವನ್ನು ಮಾತ್ರ ನಾವು ಪರಿಗಣಿಸಿದ್ದೇವೆ.*

*13. ಗ್ರಾಮ ಪಂಚಾಯಿತಿಯು ಮಾಲಿಕತ್ವ ಹೊಂದಿದ ಸ್ವತ್ತಿನ ವಿಲೆಗೆ ಕ್ರಮ ಪ್ರಾರಂಭಿಸಲಾಗಿದ್ದ ಆ ಸಂದರ್ಭಗಳು, ಅಧಿನಿಯಮದ 209ನೇ ಪ್ರಕರಣದ ಉಪಬಂಧಕ್ಕೆ ವಿರುದ್ಧವಾದುದಾಗಿದೆಯಾದ್ದರಿಂದ ಅಧಿಕಾರ ವ್ಯಾಪ್ತಿ ಇಲ್ಲದವುಗಳಾಗಿವೆ; ಭಾರತ ಒಕ್ಕೂಟ ಮತ್ತು ಇನ್ನೊಬ್ಬರು –ವಿರುದ್ಧ– ಡಬ್ಲ್ಯೂ.ಎನ್. ಛಡ್ಡ ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನನುಸರಿಸಿ, ಮಾನ್ಯ ಏಕ ಪೀಠ ನ್ಯಾಯಾಧೀಶರು, ಸಹಜವಾಗಿಯೇ, ಅಹವಾಲು ಆಲಿಸುವ ಯಾವುದೇ ಅವಕಾಶವನ್ನು ಕ್ಲೇಮು ಮಾಡಲು ಅವು ಹಕ್ಕುಳ್ಳವುಗಳಾಗಿಲ್ಲವೆಂದು ನಿರ್ಣಯಿಸಿದ್ದಾರೆ; ಸರ್ವೋಚ್ಚ ನ್ಯಾಯಾಲಯದ ನಿರ್ಣಯವು ಈ ಕೆಳಗಿನಂತಿದೆ:*

*"ಪ್ರಶ್ನಿತ ಆದೇಶವನ್ನು, ಆತನು ಸ್ವಾತಂತ್ರ್ಯ ಅಥವಾ ಸ್ವತ್ತು ವಂಚಿತ ವ್ಯಕ್ತಿಯಾಗಿರುವನೆಂದು ತೋರಿಸಿದ ಹೊರತು, ಉಭಯ ಪಕ್ಷವನ್ನು ವಿಚಾರಿಸತಕ್ಕದ್ದು ಎಂಬ ನಿಯಮವನ್ನು ಅನ್ವಯಿಸಲಾಗುವುದಿಲ್ಲ. ಉಭಯ ಪಕ್ಷವನ್ನು ವಿಚಾರಿಸತಕ್ಕದ್ದು ಎಂಬ ನಿಯಮವು, ನ್ಯಾಯದ ನಿಯಮವಾಗಿದೆ ಮತ್ತು ನಿಯಮವೇ ಸ್ವತಃ ಅನ್ಯಾಯಕ್ಕೆ ದಾರಿ ಮಾಡಿಕೊಡುವಲ್ಲಿ ಈ ನ್ಯಾಯದ ನಿಯಮವನ್ನು ಅನ್ವಯಿಸುವುದರಿಂದ ಹೊರಗಿಡಲಾಗುವುದು. ಮೊಕದ್ದಮೆಗೆ ಹಾಜರಾಗಿ ಆಕ್ಷೇಪಗಳಿಗೆ ಸಮಜಾಯಿಸಿ ನೀಡುವ ಅವಕಾಶವನ್ನು ನೀಡದಿರುವ ಮೂಲಕ ಅನ್ಯಾಯದ ತೀರ್ಮಾನಕ್ಕೆ ಬರಲಾಗದಿರುವ ಮೊಕದ್ದಮೆಗಳಿಗೆ ಉಭಯ ಪಕ್ಷವನ್ನು ವಿಚಾರಿಸತಕ್ಕದ್ದು ಈ ನಿಯಮವನ್ನು ಅನ್ವಯಿಸುವುದರಿಂದ*

*ಹೊರಗಿಡಲಾಗಿದೆ. ಈ ನಿಯಮವನ್ನು, ನ್ಯಾಯದ ಉದ್ದೇಶಗಳನ್ನು ವಿಫಲಗೊಳಿಸಲು ಅಥವಾ ನ್ಯಾಯವನ್ನು 'ಜಡಗೊಳಿಸಲು, ಅಸಂಗತಗೊಳಿಸಲು, ನಿರರ್ಥಕಗೊಳಿಸಲು ಮತ್ತು ಸ್ವಯಂ-ವಿಫಲಗೊಳಿಸಲು ಅಥವಾ ಸ್ಪಷ್ಟವಾಗಿ ಸನ್ನಿವೇಶದ ಸಾಮಾನ್ಯ ಭಾವಕ್ಕೆ ವಿರುದ್ಧಗೊಳಿಸಲು' ಅನ್ವಯಿಸಲಾಗುವುದಿಲ್ಲ ಹಾಗೂ ಕಡ್ಡಾಯ ಅವಶ್ಯಕತೆಯು ಹಾಗೆ ಬೇಡಿಕೆ ಇಡುವ ಅತ್ಯಂತ ಅಸಾಧಾರಣ ಸಂದರ್ಭಗಳಲ್ಲಿ ಈ ನಿಯಮವನ್ನು ಬಿಟ್ಟುಬಿಡಬಹುದು. ಉಭಯ ಪಕ್ಷವನ್ನು ವಿಚಾರಿಸತಕ್ಕದ್ದು ಈ ನಿಯಮವನ್ನು ಅನ್ವಯಿಸದಿರುವ ಕೆಲವು ಅಸಾಧಾರಣ ಸಂದರ್ಭಗಳು ಮತ್ತು ಸನ್ನಿವೇಶಗಳು ಇರುತ್ತವೆ."*

*13.2 ಆದುದರಿಂದ, ಅಧಿನಿಯಮದ 209ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿರುವ ಬಿಡ್‌ನ್ನು ರದ್ದುಗೊಳಿಸುವ ಮುಂಚೆ ಅಹವಾಲನ್ನು ಹೇಳಿಕೊಳ್ಳುವ ಅವಕಾಶವನ್ನು ಹೊಂದಲು ಅರ್ಜಿದಾರರು ಅರ್ಹರಾಗಿಲ್ಲವೆಂಬುದು ನಮಗೆ ಮನವರಿಕೆಯಾಗಿದೆ.*

*13.3. ಆದಾಗ್ಯೂ, ಅಧಿನಿಯಮದ 209ನೇ ಪ್ರಕರಣಕ್ಕೆ ಮಾಡಿದ ತರುವಾಯ ತಿದ್ದುಪಡಿಯನ್ನು ಪರಿಗಣನೆಗೆ ತೆಗೆದುಕೊಂಡು, ಮಾನ್ಯ ಏಕ ಪೀಠ ನ್ಯಾಯಾಧೀಶರು, ಬಡಾವಣೆ ನಿರ್ಮಾಣಕ್ಕಾಗಿ ಅಗತ್ಯ ಅನುಮತಿಯನ್ನು ಪಡೆಯುವ ಇಡೀ ಪ್ರಕ್ರಿಯೆಯನ್ನು ಪುನರಾವರ್ತಿಸಲು, ಹಾಗೂ ಕಾನೂನು ಮತ್ತು ನಿಯಮಗಳಿಗನುಸಾರವಾಗಿ ನಿವೇಶನಗಳನ್ನು ಕಡ್ಡಾಯವಾಗಿ ವಿಲೆ ಮಾಡಲು ಗ್ರಾಮ ಪಂಚಾಯಿತಿಯು ಮುಕ್ತವಾಗಿದೆ ಹಾಗೂ ಅರ್ಜಿದಾರರು ಪ್ರಯೋಜನ ಪಡೆಯುವ ಸಂಭವವಿದ್ದರೆ, ಗ್ರಾಮ ಪಂಚಾಯಿತಿಯು ತದನುಸಾರವಾಗಿ 1998ನೇ ಸಾಲಿನಲ್ಲಿ ನಡೆದ ಹರಾಜಿನಲ್ಲಿ ಅರ್ಜಿದಾರರು ಠೇವಣಿ ಮಾಡಿದ ಮೊತ್ತಗಳನ್ನು*

*ಸರಿಹೊಂದಿಸತಕ್ಕದ್ದು, ಅಂಥ ಅರ್ಜಿದಾರರಿಗೆ ಠೇವಣಿ ಇರಿಸಿದ ಹಣವನ್ನು, ಸದರಿ ಮೊತ್ತದ ಮೇಲೆ ಪ್ರತಿ ವರ್ಷಕ್ಕೆ ಶೇಕಡ 12ರಷ್ಟು ಬಡ್ಡಿಯೊಂದಿಗೆ, ವಿಳಂಬವಿಲ್ಲದೆ ಮರು–ಪಾವತಿ ಮಾಡಲು ಗ್ರಾಮ ಪಂಚಾಯಿತಿಗೆ ನಿರ್ದೇಶಿಸಲಾಗಿದೆ."*

18. ಮೇಲೆ ಹೇಳಿದ ಶಾಸನಾತ್ಮಕ ನಿಷೇಧದ ದೃಷ್ಟಿಯಿಂದ, ವರ್ಗಾವಣೆ ಮಾಡುವ ಅಥವಾ ಗುತ್ತಿಗೆಗೆ ನೀಡುವ ಸಂಬಂಧದಲ್ಲಿ ಅಂಗೀಕರಿಸಿದ ಯಾವುದೇ ಗೊತ್ತುವಳಿಗೆ, ಮೇಲೆ ಪರ್ಯಾಲೋಚಿಸಿದಂತೆ ಪೂರ್ವಾನುಮೋದನೆ ಪಡೆಯಬೇಕು. ಒಪ್ಪಿಕೊಂಡಿರುವಂತೆ, ಪ್ರಸ್ತುತ ಮೊಕದ್ದಮೆಯಲ್ಲಿ, ಗೊತ್ತುವಳಿಯನ್ನು ಅಂಗೀಕರಿಸುವ ಮೊದಲು, ಗ್ರಾಮ ಪಂಚಾಯಿತಿಯು ಯಾವುದೇ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ತರುವಾಯದಲ್ಲಿ, ದಿನಾಂಕ: 16.8.2012ರಂದು, ತಾಲ್ಲೂಕು ಪಂಚಾಯಿತಿಯು ಅದನ್ನು ಅನುಮೋದಿಸಿದ್ದಾಗ್ಯೂ, ಇದು, ಮೇಲೆ ಹೇಳಿದ ನಿಯಮಗಳನ್ನು ವಿಮುಕ್ತಗೊಳಿಸುವುದಿಲ್ಲ. ಆದುದರಿಂದ, ಗ್ರಾಮ ಪಂಚಾಯಿತಿಯು ಅಂಗೀಕರಿಸಿದ ಮತ್ತು ಅನುಬಂಧ–ಬಿ ಪ್ರಕಾರ ತಾಲೂಕು ಪಂಚಾಯಿತಿಯು ಅನುಮೋದಿಸಿದ ನಿರ್ಣಯವನ್ನು ಸಮರ್ಥಿಸಲಾಗುವುದಿಲ್ಲ. ಮೇಲೆ ಹೇಳಿದ ಕಾರಣಗಳಿಗಾಗಿ, ರಿಟ್ ಅರ್ಜಿಯಲ್ಲಿ ಎತ್ತಿದ ಅಂಶಕ್ಕೆ, ಕರ್ನಾಟಕ ಗ್ರಾಮ ಪಂಚಾಯಿತಿ (ಸ್ಥಿರ ಮತ್ತು ಚರ ಸ್ವತ್ತುಗಳ ಆರ್ಜನೆ ಮತ್ತು ವರ್ಗಾವಣೆ) ನಿಯಮಗಳು, 1996ರ 3ನೇ ಮತ್ತು 5ನೇ ನಿಯಮಗಳ ಅಡಿಯಲ್ಲಿ ಪರ್ಯಾಲೋಚಿಸಿದಂತೆ, ತಾಲೂಕು ಪಂಚಾಯಿತಿಯ ಪೂರ್ವಾನುಮೋದನೆ ಇಲ್ಲದೆ ಪ್ರತಿವಾದಿ ಸಂಖ್ಯೆ 4 ಇವರ ಹೆಸರಿನಲ್ಲಿ ಗ್ರಾಮ ಪಂಚಾಯಿತಿಯು ಅದರ ಸ್ವತ್ತನ್ನು ವರ್ಗಾವಣೆ ಮಾಡಲು ಯಾವುದೇ ಗೊತ್ತುವಳಿಯನ್ನು ಅಂಗೀಕರಿಸಲಾಗುವುದಿಲ್ಲವೆಂದು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

19. ಗ್ರಾಮ ಪಂಚಾಯಿತಿಗೆ ಸೇರಿದ 28x30 ಅಡಿ ಅಳತೆಯ ಖಾತಾ ಸಂಖ್ಯೆ: 233 ಮತ್ತು ಕರ ನಿರ್ಧರಣೆ ಸಂಖ್ಯೆ: 233/215ನ್ನು ಹೊಂದಿರುವ ಖಾಲಿ ಭೂಮಿಯ ಸಂಬಂಧದಲ್ಲಿ ಅರ್ಜಿದಾರರು ಅನುಭೋಗದ ಹಕ್ಕನ್ನು ಕ್ಲೇಮು ಮಾಡಿದ್ದಾರೆಂಬುದು

ಒಪ್ಪಿಕೊಂಡ ಸಂಗತಿಯಾಗಿದ್ದು, ಅದು ಚಿಕ್ಕಮಗಳೂರಿನ ಪ್ರಧಾನ ಸಿವಿಲ್ ನ್ಯಾಯಾಧೀಶರ ಕಡತದಲ್ಲಿ ಇತ್ಯರ್ಥದಲ್ಲಿರುವ ಒ.ಎಸ್. ಸಂಖ್ಯೆ: 214/2012ರಲ್ಲಿ ಮೂಲ ದಾವೆಯ ಫಲಿತಾಂಶಕ್ಕೆ ಒಳಪಟ್ಟಿರತಕ್ಕದ್ದು.

20. ಮೇಲಿನ ಸಂಗತಿಯ ಹಿನ್ನಲೆಯಲ್ಲಿ, ರಿಟ್ ಅರ್ಜಿಗೆ ಅನುಮತಿ ನೀಡಲಾಗಿದೆ. ಪ್ರತಿವಾದಿ ಸಂಖ್ಯೆ 2 ಮತ್ತು 3 ಇವರು ಹೊರಡಿಸಿದ ಪ್ರಶ್ನಿತ ಆದೇಶಗಳನ್ನು ಈ ಮೂಲಕ ರದ್ದುಗೊಳಿಸಲಾಗಿದೆ ಮತ್ತು ಅದು ಗ್ರಾಮ ಪಂಚಾಯಿತಿಗೆ ಸೇರಿದ ಭೂಮಿಯ ಸಂಬಂಧದಲ್ಲಿ ಅನುಭೋಗದ ಹಕ್ಕನ್ನು ಕ್ಲೇಮು ಮಾಡಿ ಅರ್ಜಿದಾರರು ಸಲ್ಲಿಸಿದ ಒ.ಎಸ್. ಸಂಖ್ಯೆ: 214/2012ರಲ್ಲಿ ಮೂಲ ದಾವೆಯ ಫಲಿತಾಂಶಕ್ಕೆ ಒಳಪಟ್ಟಿರತಕ್ಕದ್ದು.

21. ಆದಾಗ್ಯೂ, ಗ್ರಾಮ ಪಂಚಾಯಿತಿಯು, ಮೇಲೆ ಹೇಳಿದ ಪ್ರಕ್ರಿಯೆಯನ್ನು ಅನುಸರಿಸಲು ಮತ್ತು ಕಾನೂನಿಗನುಸಾರವಾಗಿ ಮುಂದುವರಿಯಲು ಮುಕ್ತವಾಗಿದೆ ಎಂದು ಅಭಿಪ್ರಾಯಪಡಲಾಗಿದೆ.

ತದನುಸಾರವಾಗಿ ಆದೇಶಿಸಲಾಗಿದೆ.